ಓದಿದ್ದು ಪಂಚಾಕ್ಷರಿಯವರಿಗೆ ಹೇಳಿದೆ. ತಕ್ಷಣ ಅವರು, 'ಇನ್ನು ಮುಂದೆ ಕಾದಂಬರಿ ಓದಬೇಡ, ಕತೆ ಓದು' ಎಂದರು. ನನಗೆ ಏನೂ ತಿಳಿಯದಾಯಿತು. ಕತೆ, ಕಾದಂಬರಿ, ಕಾವ್ಯ ಎಲ್ಲವೂ ಸಾಹಿತ್ಯವೇ, ನನಗೆ ಇಷ್ಟವಾದ ಯಾವುದನ್ನಾದರೂ ಓದುವ ಆಸಕ್ತಿಗೆ ಮಿತಿ ಹಾಕಬಾರದಲ್ಲ ಅಂದುಕೊಂಡೆ.

ನಿರಂಜನರ ಅನೇಕ ಕತೆಗಳನ್ನು, 'ವಿಮೋಚನೆ', 'ಬನಶಂಕರಿ' ಕಾದಂಬರಿ, 'ಸಾಧನಾ' ಪತ್ರಗುಚ್ಛ ಮುಂತಾದುವನ್ನು ಓದಿದೆ. ಅವರ 'ಕೊನೆಯ ಗಿರಾಕಿ' ನನಗೆ ಬಹಳ ಹಿಡಿಸಿದ ಕತೆ. ಅದನ್ನು 'ಅಂತಿಮ್ ಗ್ರಾಹಕ್' ಹೆಸರಿನಿಂದ ಹಿಂದಿಗೆ ಅನುವಾದಿಸಿದೆ (ಡಿಸೆಂಬರ್ 1959). ಈ ಮಧ್ಯೆ ಹಿಂದಿಯ 'ಆಜ್‌ಕಲ್' ಮುಂತಾದ ಪತ್ರಿಕೆಗಳಲ್ಲಿ ನನ್ನ ಅನುವಾದಗಳು ಪ್ರಕಟವಾಗಿದ್ದುವು. ಈ ಕತೆಯನ್ನೂ ಪ್ರಕಟಣೆಗೆ ಕಳಿಸಲು ಯೋಚಿಸಿದೆ, ಅದನ್ನು ಪಂಚಾಕ್ಷರಿ ಹಿರೇಮಠರಿಗೆ ಓದಲು ಕೊಟ್ಟೆ. ಬಹಳ ದಿನಗಳವರೆಗೆ ಅದು ಅವರಲ್ಲಿಯೇ ಉಳಿಯಿತು. ಆನಂತರ ನಾನು ಇಂಟರ್ ಕ್ಲಾಸ್ ಪರೀಕ್ಷೆಯ ಸಿದ್ಧತೆಯಲ್ಲಿ ಮುಳುಗಿದೆ. ಕೆಲವು ತಿಂಗಳುಗಳ ನಂತರ ಒಮ್ಮೆ ಅದನ್ನು ನೆನಪಿಸಿದೆ, ಅವರಿಗೂ ಮರೆತುಹೋಗಿದ್ದ ನನ್ನ ಅನುವಾದವನ್ನು ಹುಡುಕಿಕೊಟ್ಟರು.

## 4

ನಾನು ಬಿ.ಎ. ಕೊನೆಯ ವರ್ಷದಲ್ಲಿ ಓದುತ್ತಿದ್ದೆ (1960–61). ಆ ಹೊತ್ತಿಗೆ 1958ರಿಂದಲೇ ನಿರಂಜನರು ಧಾರವಾಡದ ನಿವಾಸಿಯಾಗಿದ್ದರು. ಅವರು ಮಿಶನ್ ಕಂಪೌಂಡ್‌ಗೆ ಹೊಂದಿಕೊಂಡು, ಪಿ.ಬಿ. ರಸ್ತೆಯಲ್ಲಿದ್ದ ದೈವಜ್ಞ ಭವನ ಎಂಬ ಕಟ್ಟಡವನ್ನು ವಾಸಕ್ಕಾಗಿ ಪಡೆದಿದ್ದರು. (ಈಗ ಅದು ದೈವಜ್ಞ ಗಣಪತಿ ಮಂದಿರವಾಗಿದೆ, ಅದರ ಬಲಬದಿಯಲ್ಲಿ ದೈವಜ್ಞ ಕಲ್ಯಾಣ ಮಂಟಪವಾಗಿದೆ.) ಅದರ ಸುತ್ತ ಸಾಕಷ್ಟು ವಿಶಾಲ ಖಾಲಿ ಜಾಗವಿತ್ತು. ಆ ಮನೆಗೆ ಹತ್ತಿರದಲ್ಲಿಯೇ, ಅಜಮಾಸು 10–12 ನಿಮಿಷಗಳಲ್ಲಿ ನಡೆದು ತಲುಪಬಹುದಾದಷ್ಟು ಸಮೀಪದ ಹಳ್ಳಿಕೇರಿ ಚಾಳಿನಲ್ಲಿ ಡಾ. ಅನುಪಮಾ ಅವರ ಹೆರಿಗೆ ಆಸ್ಪತ್ರೆ ನೆಲೆಗೊಂಡಿತ್ತು. ಶ್ರೀಮಂತ ಹಳ್ಳಿಕೇರಿಯವರೇ ವಾಸವಾಗಿದ್ದ ವಿಶಾಲ ಮನೆಯನ್ನು ಪಂಚಾಕ್ಷರಿಯವರು ಹೇಗೆ ದೊರಕಿಸಿಕೊಂಡಿದ್ದರೋ ಗೊತ್ತಿಲ್ಲ. ಈಗ ಇಡೀ ಮನೆಯಲ್ಲಿ ಮನೆಯ ಒಡತಿ ಮತ್ತು ಅವರ ಮಗ ಇಬ್ಬರೇ ಇದ್ದರು ಅನಿಸುತ್ತದೆ. ಬಹುಶಃ ಅವರು ಮನೆಯ ಉತ್ತರ ಭಾಗದ ಒಂದು ಮೂಲೆಯಲ್ಲಿ ತಾವು ಇದ್ದು, ಉಳಿದ ಭಾಗವನ್ನು ಆಸ್ಪತ್ರೆ ಮಾಡಲು ಬಿಟ್ಟು ಕೊಟ್ಟಿದ್ದರು. ಮನೆಯ ಮುಂಭಾಗದಲ್ಲಿಯೂ ಮೂರ್ನಾಲ್ಕು ವಾಹನಗಳು ನಿಲ್ಲಬಹುದಾದಷ್ಟು ವಿಶಾಲ ಸ್ಥಳವಿತ್ತು. ಅದೆಲ್ಲವನ್ನೂ ಅನುಪಮಾ ಅವರು ಬಳಸಿಕೊಳ್ಳಬಹುದಾಗಿತ್ತು. ಆಸ್ಪತ್ರೆಗೆ ಬರುವ ಜನರಿಗೆ, ವಾಹನಗಳಿಗೆ ಅನುಕೂಲವಾಗುವಂತೆ ಪಿ.ಬಿ. ರಸ್ತೆಯ ಕಡೆಗಿದ್ದ ಆವರಣ ಗೋಡೆಯನ್ನು ಕೆಡವಿ ಮುಖ್ಯ ರಸ್ತೆ ಹಾಗೂ ಗೇಟ್ ಮಾಡಿಸಿಕೊಂಡಿದ್ದರು. ಉತ್ತರ ಕಡೆಗಿದ್ದ ಮೊದಲಿನ ದಾರಿಯನ್ನು ಮನೆಯ ಮಂದಿ ಬಳಸುತ್ತಿದ್ದರು. ಈಗಿನ ಗೇಟನ್ನು ಆಸ್ಪತ್ರೆಗೆ ಬರುವವರು ಬಳಸುತ್ತಿದ್ದರು. ಬಹುಶಃ ಪಂಚಾಕ್ಷರಿಯವರು ಬಹಳಷ್ಟು ಸುತ್ತಾಡಿ ಒಂದು ಒಳ್ಳೆಯ ಮನೆಯನ್ನು ಹಾಗೂ ಸಮೀಪದಲ್ಲಿಯೇ ಇದ್ದ ಈ ಸ್ಥಳವನ್ನು ಹೊಂದಿಸಿಕೊಟ್ಟಿದ್ದರು. ಡಾ. ಅನುಪಮಾ ನಿರಂಜನ ಅವರು ಆರಂಭಿಸಿದ ಹೆರಿಗೆ ಆಸ್ಪತ್ರೆ, ಹೆರಿಗೆಗಾಗಿಯೇ ಎಂದು ಧಾರವಾಡದಲ್ಲಿ ಆರಂಭವಾದ, ಬಹುಶಃ ಈ ಭಾಗದ, ಪ್ರಪ್ರಥಮ ಆಸ್ಪತ್ರೆಯಾಗಿತ್ತು.

ಸಾಮಾನ್ಯವಾಗಿ ಧಾರವಾಡಕ್ಕೆ ಬರುತ್ತಿದ್ದ ಎಲ್ಲ ಸಾಹಿತಿಗಳು ಟಿ.ಡಿ. ಶಿವಲಿಂಗಯ್ಯನವರ 'ಸಾಹಿತ್ಯ ಭಂಡಾರ'ಕ್ಕೆ ಭೇಟ್ಟಿ ಕೊಡುವುದು ರೂಢಿಯಾಗಿತ್ತು. ತರಾಸು, ಸಿದ್ದಯ್ಯ ಪುರಾಣಿಕ ಮುಂತಾದ ಸಾಹಿತಿಗಳನ್ನು ನಾನು ಕಂಡಿದ್ದು, ಭೆಟ್ಟಿಯಾಗಿದ್ದು, ಪರಿಚಯ ಮಾಡಿಕೊಂಡಿದ್ದು ಈ 'ಸಾಹಿತ್ಯ ಭಂಡಾರ'ದಲ್ಲಿಯೇ. ಈ ಪರಿಯ 'ಸಾಹಿತ್ಯ ಭಂಡಾರ'ಕ್ಕೆ ಸಹ ನಿರಂಜನರು ಒಮ್ಮೆಯೂ ಬಂದಿರಲಿಲ್ಲ; ವಾರದಲ್ಲಿ 2–3 ಸಲವಾದರೂ ಆ ಪುಸ್ತಕ ಅಂಗಡಿಗೆ ಹೋಗುತ್ತಿದ್ದ ನಮ್ಮ ಮುಂದೆಯೂ, ಬಹುಪಾಲು ಎಲ್ಲ ಸಾಹಿತಿಗಳ ನಿಕಟ ಸಂಪರ್ಕ ಹೊಂದಿದ್ದ ಟಿ.ಡಿ. ಶಿವಲಿಂಗಯ್ಯನವರು ಸಹ, ನಿರಂಜನರ ಬಗ್ಗೆ ಪ್ರಸ್ತಾಪಿಸಿರಲಿಲ್ಲ. ಇದರಲ್ಲಿ ನಿರಂಜನರ ಸ್ವಭಾವವೂ ಸ್ವಾಭಿಮಾನವೂ ಇದ್ದಿರಬಹುದು, ಧಾರವಾಡದ ಆಗಿನ ಸಾಹಿತಿಗಳು, ಸಾಹಿತ್ಯ ಸಂಸ್ಥೆಗಳು ತೋರಿದ ನಿರ್ಲಕ್ಷ್ಯವೂ ಇದ್ದಿರಬಹುದು; ಎಲ್ಲರಿಗೂ ಸಂಪರ್ಕ ಸೂತ್ರದಂತಿದ್ದ ಶಿವಲಿಂಗಯ್ಯನವರ ಸೋದ್ದೇಶ